ದಾಂಪತ್ಯವಾಗಿರುತ್ತಿತ್ತು. ಅರಳಿದ ಸಂಬಂಧದ ಪರಿಮಳ ಗಾಳಿಯಲ್ಲಿ ಲೀನವಾಗಿ ಅದು ನಿರ್ಗಂಧ ಕುಸುಮವಾಗುವುದಕ್ಕೆ ಮೊದಲೇ ಬೇರೆಯಾಗಿ ಅದರ ಪರಿಮಳವನ್ನು ಇವರು ಉಳಿಸಿಕೊಂಡರು. ಇದನ್ನು ಪ್ರಜ್ಞಾಪೂರ್ವಕವಾಗಿ ಅವರು ಸಾಧಿಸಿಕೊಂಡರೆಂತಲ್ಲ. ಅದು ಘಟಿಸಿತು, ಅಷ್ಟೇ.

ಟೆಡ್ ಹ್ಯೂಸ್ ಮತ್ತು ಸಿಲ್ವಿಯಾ ಅವರ ಸಖೀಗೀತವೂ, ಅವರಿಬ್ಬರ ಜೀವನ ಚರಿತ್ರೆಯೂ ಆ ಕಾಲದ ಸಾಮಾಜಿಕ, ಸಾಂಸ್ಕೃತಿಕ ಸಂದರ್ಭಗಳ ವಕ್ತಾರಿಕೆಯೂ ಆಗಿರುವ ಈ ಕೃತಿ ಅಂತಿಮವಾಗಿ ಈ ಎಲ್ಲವೂ ಆಗುತ್ತಲೇ ಇವುಗಳನ್ನೂ ಮೀರುವ ಹವಣಿಕೆಯಲ್ಲಿದೆ. ಬಾಲ್ಯದಿಂದಲೇ ಇವರಿಬ್ಬರ ವ್ಯಕ್ತಿತ್ವದ ಸಾಮಾನ್ಯತೆಯಲ್ಲಿಯೂ ಕಾಣಿಸುತ್ತಿದ್ದ ಅಸಾಮಾನ್ಯವಾಗಿಯೂ ಹುಚ್ಚಿನ ಅಂಚಿನಲ್ಲಿದ್ದುದಾಗಿಯೂ ಕಾಣಿಸುವ ಅಂಶಗಳನ್ನು ನಟರಾಜ್ ಪರಿಣಾಮಕಾರಿಯಾಗಿ ಚಿತ್ರಿಸುತ್ತಾರೆ. ಬದುಕನ್ನು ತೀವ್ರಾನುರಕ್ತಿಯಲ್ಲಿ ಬದುಕುವುದು ಇವರಿಬ್ಬರಲ್ಲೂ ಸಾಮಾನ್ಯವಾದೊಂದು ಅಂಶ. ಅದೇ ಇವರಿಬ್ಬರನ್ನೂ ಒಂದಾಗಿಸಿದ್ದು. ಸಾವಿನ ಬಗೆಗೆ ಸಿಲ್ವಿಯಾಳ ಸೆಳೆತದ ಮನೋವೈಜ್ಞಾನಿಕ ಕಾರಣಗಳೇನೇ ಇರಲಿ, ಅದು ಅವಳನ್ನು ಈ ತುಂಬಿ ಬಾಳು ತುಂಬಿರುವ ತನಕ ತುಂತುಂಬಿ ಕುಡಿಯಲು ಅಣಿಗೊಳಿಸಿತು, ನೂಕಿತು, ಮುಳುಗಿಸಿತು. ಬಾಲ್ಯದಲ್ಲಿ ಅಪ್ಪನನ್ನು ಕಳೆದುಕೊಂಡವಳಿಗೆ ಉದ್ದಕ್ಕೂ ಆ ಅಭದ್ರತೆ ಕಾಡುತ್ತಲೇ ಇತ್ತು.

ಅಪ್ಪ ಸತ್ತ ಮೇಲೆ ಅಮ್ಮ
ಮತ್ತೆ ಮದುವೆಯಾದರೇನು ಗತಿಯೆಂದು ಅತ್ತಳು;
ಮತ್ತೆ ಮದುವೆಯಾಗುವುದಿಲ್ಲವೆಂದು
ತಾನೇ ಟಿಪ್ಪಣಿ ಬರೆದು ಅಮ್ಮನ ಸಹಿ ಹಾಕಿಸಿಕೊಂಡಳು!

ಸಿಲ್ವಿಯಾಳ ಸ್ವಕೇಂದ್ರಿತ, ಆತ್ಮರತಿಯ ಅಂಚಿನ ವ್ಯಕ್ತಿತ್ವ ಅವಳ ಬದುಕಿನ ನಿರ್ಧಾರಗಳನ್ನು ಉದ್ದಕ್ಕೂ ಪ್ರೇರೇಪಿಸಿದೆ. ಬದುಕು ಅನಿಶ್ಚಿತ ಎನ್ನುವ ಆತಂಕವನ್ನು ಮೀರಿಕೊಳ್ಳಲೆಂದೇ ಸಿಲ್ವಿಯಾ ಬದುಕನ್ನು ಇನ್ನೂ ಇನ್ನೂ ಗಟ್ಟಿಯಾಗಿ ಅಪ್ಪುತ್ತಾ ಹೋಗುತ್ತಾಳೆ. ಗಂಡಾಳಿಕೆಯ ಅಗೋಚರ ಕಾವಲಿನ ಅನುಭವದಿಂದಲೇ ಇರಬೇಕು, ತನಗೆ ಬೇಕಾಗಿ ಮಾಡಿದ ಕಾರ್ಯಗಳನ್ನು ಕುರಿತು ಒಳಗೆಲ್ಲೋ ಉಳಿದ ಅನುಮಾನ, ಭಯ, ಸಂಕೋಚ... ಇದಕ್ಕಾಗಿಯೇ ಅವಳೊಬ್ಬ ಸಿಡಿಮಿಡಿಯ ಹುಡುಗಿಯೂ ಆಗಿದ್ದು. ಇದು ಅವಳನ್ನು ನಿರ್ಬಂಧಿಸಿತೆಂದಲ್ಲ, ಅದನ್ನು ಧಿಕ್ಕರಿಸುವ ಬಂಡಾಯದ ಗುಣ ಅವಳಲ್ಲಿ ಹುಟ್ಟಿನಿಂದಲೇ ಇತ್ತೇನೋ. ಪ್ರೊಫೆಸರ್‌ನ ಮಗಳಾಗಿ ನಾಗರಿಕ ಜಗತ್ತಿನ ನಡಾವಳಿಯೂ ಎಲ್ಲೋ ಒಮ್ಮೊಮ್ಮೆ ಅವಳನ್ನು ಅವಳಿಗೇ ಗೊತ್ತಾಗದಂತೆ ಕಂಗಾಲಾಗಿಸಿದ್ದರಬೇಕು. ಇವೂ ಮನೋವಿಜ್ಞಾನಿಗಳ ವರದಿಯಂತೆಯೇ ಇದ್ದಿರಬಹುದಾದರೂ ಅವಳ ವ್ಯಕ್ತಿತ್ವವನ್ನು ಅರ್ಥ ಮಾಡಿಕೊಳ್ಳಲು ನೆರವು ನೀಡಬಹುದು. ಇದಕೆ ತದ್ವಿರುದ್ಧ ಎನ್ನುವಂತಿದ್ದ ಟೆಡ್ಡಿಯ ಬದುಕು, ಅವನ ಹಳ್ಳಿಗಾಡಿನ ಹಿನ್ನೆಲೆಯಿಂದ ಮಾತ್ರ ರೂಪುಗೊಂಡದ್ದಲ್ಲ, ಗಂಡಿನ ಆಜನ್ಮಹಕ್ಕು ಎನ್ನುವಂತಿದ್ದ ಮೌಲ್ಯವ್ಯವಸ್ಥೆಯ ಬೆಂಬಲವು ಅವನಿಗಿದ್ದೇ ಇತ್ತು. ಇವನು ಸಿಲ್ವಿಯಾಳನ್ನು ಒಲಿದದ್ದು, ಒಲಿಸಿಕೊಂಡದ್ದು ಅವಳ ಕವಿಪ್ರತಿಭೆಗಾಗಿಯೋ? ಅವಳ ಸೌಂದರ್ಯಕ್ಕಾಗಿಯೊ? ಈ ಎರಡೂ ಭಿನ್ನ ಪ್ರಶ್ನೆಗಳಲ್ಲ ಎನ್ನುವುದು ನಿಜ. ಆದರೆ, ಯಾವುದೂ ನಿರ್ಬಂಧಿಸಲಾಗದ, ಗಾಳಿಯಂತೆ, ಆಕಾಶದಂತೆ ಮುಕ್ತವಾದ ಎರಡು ವ್ಯಕ್ತಿತ್ವಗಳು ಬಯಲಿನಿಂದ ಆಲಯಕ್ಕೆ ಬಂದಂತೆ ಮದುವೆಯಾಗುತ್ತಾರೆ. ಆಗಲೂ ಅವರಿಬ್ಬರೂ ಆಲಯವನ್ನೇ ಬಯಲಿನ ವಿಸ್ತಾರದಲ್ಲಿ ಹಿಗ್ಗಿಸಿಕೊಳ್ಳುತ್ತೇವೆ ಎಂದುಕೊಂಡಿದ್ದರೇನೋ.

ಮದುವೆ ಎನ್ನುವ ಸಂಸ್ಥೆಯನ್ನು ಕುರಿತಂತೆ ನಟರಾಜ್ ಎತ್ತಿರುವ ಪ್ರಶ್ನೆಗಳು, ಎಳೆದಿರುವ